# ಕೂದಲಿಗೆ ಮೆರುಗು ಒಪೆಲ್ ಹೇರ್ ಕಲರ್





ಕೂದಲಿಗೆ ಹೊಳಪು ನೀಡಿ ಬಣ್ಣ ಬಣ್ಣದ ಸ್ಪರ್ಶಕ್ಕೆ ಎಡತಾಕಿಸಿ ಕಾಮನಬಿಲ್ಲಿನಂತೆ ಮಿಂಚುವ ಒಪೆಲ್‌ಹೇರ್ ಕಲರ್ ಯುವತಿಯರ ಆಕರ್ಷಣೆ. ಇದೀಗ ಫ್ಯಾಷನ್ ಟ್ರೆಂಡ್ ಕೂಡ.

**■ ಪ.ನಾ.ಹಳ್ಳಿ ಹರೀಶ್‌ಕುಮಾರ್**

ಕೆಲವರಿಗೆ ಎಷ್ಟೇ ನಯವಾದ, ಕಡುಗಪ್ಪಾದ ಕೂದಲು ಇದ್ದರೂ ಅದಕ್ಕೊಂದಿಷ್ಟು ಬಣ್ಣ ಬಳಿದುಕೊಂಡು ಕಲರ್‌ಫುಲ್ ಹೇರ್ ಮಾಡಿಸಿಕೊಳ್ಳುವ ಬಯಕೆ. ಇನ್ನು ಕೆಲವರು ಫ್ಯಾಷನೆಬಲ್ ಆಗಿ ಕಾಣಬೇಕೆಂದು ದಿನಕ್ಕೊಂದು ಬಣ್ಣ ಹಾಕಿ ಕೂದಲನ್ನು ಕಾಮನಬಿಲ್ಲಾಗಿಸುತ್ತಾರೆ. ಬಣ್ಣ ಬಣ್ಣದ ಕೂದಲಿಗೆ ವೈವಿಧ್ಯಮಯ ವಿನ್ಯಾಸ ಮಾಡಿಸಿಕೊಂಡು ವಿಭಿನ್ನ ಬಗೆಯ ಕೇಶ ಶೈಲಿಯಲ್ಲಿ ಮಿಂಚುವ ಹವಣಿಕೆ ಇನ್ನೂ ಹಲವರದು.

ವಿದೇಶೀಯರಿಗೆ ಕೂದಲಿಗೆ ಬಣ್ಣ ಹಚ್ಚುವ ಹುಚ್ಚು. ಪಿಂಕ್, ಗ್ರೀನ್, ಬ್ಲೂ.. ಮುಂತಾದ ಬಣ್ಣಗಳನ್ನು ಕೂದಲಿಗೆ ಹಚ್ಚಿ ಜಡೆ ಹೆಣೆದುಕೊಂಡೋ, ಪೋನಿ ಹಾಕಿಕೊಂಡೋ, ಬ್ಲಂಟ್ ಕಟ್, ಯು ಕಟ್ ಮಾಡಿಸಿಕೊಂಡು ಫ್ಯಾಷನ್‌ಪ್ರಪಂಚದಲ್ಲಿ ಬಿಂದಾಸ್ ಆಗಿ ತಿರುಗುವ ಹವ್ಯಾಸ ಹಲವರದು. ಇವೆಲ್ಲದಕ್ಕೂ ಮುಕುಟವಿಟ್ಟಂತೆ ಒಪೆಲ್ ಹೇರ್ ಈಗೀಗ ಫ್ಯಾಷನ್ ಟ್ರೆಂಡ್ ಆಗಿ ಸದ್ದು ಮಾಡುತ್ತಿದೆ.

ಪದೇ ಪದೇ ತಮ್ಮ ಕೂದಲಿನ ವಿನ್ಯಾಸ ಬದಲಿಸಿಕೊಳ್ಳುತ್ತಾ ಅಥವಾ ಅದಕ್ಕೊಂದಿಷ್ಟು ಬಣ್ಣ ಕೊಟ್ಟು ವಿವಿಧ ಸ್ಟೈಲ್ ಸ್ಟೇಟ್‌ಮೆಂಟ್ ಕೊಡುವ ಹುಡುಗಿಯರು ಇತ್ತೀಚೆಗೆ ಕೂದಲಿನ ವಿನ್ಯಾಸದ ಜತೆಜೊತೆಗೆ ಅದರ ಬಣ್ಣವನ್ನು ತುಸು ಬದಲಿಸಿ ಫ್ಯಾಷನಬಲ್ ಎಂದೆನಿಸಿಕೊಳ್ಳುವತ್ತ ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಒಪೆಲ್ ಹೇರ್ ಹೆಸರಿನ ಫ್ಯಾಷನ್ ಟ್ರೆಂಡ್ ಇದೀಗ ಯುವತಿಯರನ್ನು ಬಹುವಾಗಿ ಸೆಳೆಯುತ್ತಿದೆ.

ಒಪೆಲ್ ರೈನ್‌ಬೊ ಹೇರ್ ಕಲರ್ ಎಂಬುದು ಫ್ಯಾಷನ್ ಜಗತ್ತಿನಲ್ಲಿನ ಹೊಸ ಟ್ರೆಂಡ್ ಆಗಿ